◆ ನಿಮ್ಮ ಹಿನ್ನೆಲೆ ಬಗ್ಗೆ ಸ್ವಲ್ಪ ಹೇಳಿ. ನಿಮ್ಮ ಬಾಲ್ಯ ಹೇಗಿತ್ತು?

ನಾನು ಹುಟ್ಟಿದ್ದು ಕೋಲಾರ ಜಿಲ್ಲೆಯ ಶಾಪೂರಿನಲ್ಲಿ. ನಮ್ಮ ತಂದೆ ಸರ್ಕಾರಿ ವೈದ್ಯರಾಗಿದ್ದರು. ಅವರಿಗೆ ಆಗಾಗ ವರ್ಗಾವಣೆ ಆಗುತ್ತಿದ್ದುದರಿಂದ ಕೋಲಾರದ ಹಲವು ಹಳ್ಳಿಗಳಲ್ಲಿ ನನ್ನ ಬಾಲ್ಯ ಕಳೆಯಿತು. ಮುಖ್ಯವಾಗಿ ನೆನಪಿಸಿಕೊಳ್ಳಬೇಕಾದದ್ದು ಅಂದರೆ ದೇವರಾಯಸಮುದ್ರ ಅನ್ನೋ ಹಳ್ಳಿಯಲ್ಲಿ ನಾಲ್ಕು ವರ್ಷ ಇದ್ದೆವು; ಆ ಹಳ್ಳಿಗೆ ನನ್ನ ಬದುಕಿನಲ್ಲಿ ವಿಶೇಷ ಸ್ಥಾನವಿದೆ. ಇವತ್ತಿಗೂ ಯಾವುದೇ ಸಾಹಿತ್ಯ ಕೃತಿ ಓದಿದರೂ ಆ ದೇವರಾಯಸಮುದ್ರದ ಭೌಗೋಳಿಕ ಪರಿಪ್ರೇಕ್ಷ್ಯದಲ್ಲಿಯೇ ಅದನ್ನು ಸ್ವೀಕರಿಸುವುದು ನನಗೆ ಅಭ್ಯಾಸವಾಗಿದೆ. ಅದು ಬೆಟ್ಟದ ತಪ್ಪಲಿನಲ್ಲಿರುವ ಊರು; ಅಯ್ಯರ್‌ಗಳ ಅಷ್ಟ ಗ್ರಾಮಗಳಲ್ಲೊಂದು. ಆ ಊರಿನ ಬೆಟ್ಟ ಮತ್ತು ಅದರ ಸುತ್ತಲಿನ ಹಸಿರು ಪರಿಸರ ನನ್ನ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ನನ್ನ ಪ್ರಾಥಮಿಕ ವಿದ್ಯಾಭ್ಯಾಸ ನಡೆದದ್ದು ಅಲ್ಲಿಯೇ. ಈಗಲೂ ಎರಡು ವರ್ಷಕ್ಕೊಮ್ಮೆಯಾದರೂ ಅಲ್ಲಿಗೆ ಹೋಗಿಬರುತ್ತೇನೆ. ನನ್ನ ಹುಟ್ಟಿದೂರಿಗಿಂತ ಆ ಊರೇ ನನಗೆ ಹೆಚ್ಚು ಇಷ್ಟ. ಅಲ್ಲಿ ಬೆಟ್ಟ–ಬಂಡೆಗಳು, ಝರಿ, ತೊರೆ ಎಲ್ಲವೂ ಮೋಹಕವಾಗಿದ್ದವು. ಬೆಟ್ಟಗಳ ಬಗ್ಗೆ ನನಗೆ ಅಬ್ಸೆಷನ್ ಹುಟ್ಟಿದ್ದು ಅಲ್ಲಿಯೇ. ಆ ಊರಿನ ಬಗ್ಗೆ ನಾನು 'ಕಳುವಾದ ಊರೊಂದರ ಬದುಕು' ಎನ್ನುವ ಲೇಖನವನ್ನೂ ಬರೆದಿದ್ದೇನೆ. ಕೋಲಾರಕ್ಕೆ ಹೋದ ಮೇಲೂ ನನಗೆ ಬೆಟ್ಟಗಳ ಬಗೆಗಿನ ಆ ಮೋಹ ಹಾಗೇ ಮುಂದುವರೆಯಿತು. ಕೋಲಾರದ ಅಂತರಗಂಗೆ ಬೆಟ್ಟವನ್ನು ಸಾವಿರ ಸಲ ಹತ್ತಿ ಇಳಿದಿದ್ದೇನೆ!

◆ ಆಗ ಕೋಲಾರ ಸೀಮೆ ಹೇಗಿತ್ತು? ಆ ಪರಿಸರ ನಿಮ್ಮ ಮೇಲೆ ಬೀರಿದ ಪ್ರಭಾವ ಎಂಥದ್ದು?

ಬಾಲ್ಯದಲ್ಲಿ ಒಬ್ಬ ವ್ಯಕ್ತಿಗೆ ಸಿಗಬಹುದಾದ ಒಳ್ಳೆಯ ಪರಿಸರ ಆಗ ನನಗೆ ಕೋಲಾರದ ಹಳ್ಳಿಗಾಡಿನಲ್ಲಿ ಸಿಕ್ಕಿತ್ತು. ಕೋಲಾರ ಎನ್ನುವುದು ಬೆಂಗಾಡು, ಬರಪೀಡಿತ ಪ್ರದೇಶ ಎನ್ನುವ ಮಾತೇ ಆಗ ಇರಲಿಲ್ಲ. ಕೆರೆ ಕುಂಟೆ ಬಾವಿಗಳಲ್ಲಿ ನೀರು ಸಮೃದ್ಧವಾಗಿತ್ತು. ಎಲ್ಲೆಲ್ಲೂ ಹಸಿರು ತುಂಬಿಕೊಂಡಿತ್ತು. ಅದಕ್ಕಿಂತ ಹೆಚ್ಚಾಗಿ ಕೋಲಾರದ ಹಳ್ಳಿ ಹಳ್ಳಿಗಳಲ್ಲಿ ಜಾತ್ರೆಯೋ ಮತ್ತೊಂದೋ ನಡೆಯುತ್ತಲೇ ಇರುತ್ತಿದ್ದವು. ದೇವರಾಯಸಮುದ್ರದಲ್ಲೂ ಅಂಥ ಜಾತ್ರೆ, ಪರಿಷೆಗಳು ನಡೆಯುತ್ತಿದ್ದವು. ಇದರ ಜೊತೆಗೆ ನಾನು ತುಂಬಾ ಚಿಕ್ಕವಯಸ್ಸಿನಿಂದಲೂ ಕರಗ ನೋಡಲು ಹೋಗುತ್ತಿದ್ದೆ. ನಾವು ಹೋಳೂರಿನಲ್ಲಿದ್ದಾಗ ವಹ್ನಿ



### ಬೆಳಚಿಕ್ಕನಹಳ್ಳಿ ಶ್ರೀನಾಥ

ದಶಕಕ್ಕೂ ಹೆಚ್ಚು ಕಾಲದಿಂದ ಮುದ್ರಣ ಮತ್ತು ಟೀವಿ ಪತ್ರಕರ್ತರಾಗಿ ಕೆಲಸ ಮಾಡಿ ಅನುಭವವಿರುವ ಶ್ರೀನಾಥ್ ಸಾಹಿತ್ಯ ಮತ್ತು ಪತ್ರಿಕೋದ್ಯಮದ ವಿದ್ಯಾರ್ಥಿ. ಜೊತೆಗೆ ಸಿನಿಮಾ ಮತ್ತು ಲೇಖಕ ಪಿ. ಲಂಕೇಶ್ ಅವರ ಬರಹಗಳ ಅಪ್ಪಟ ವ್ಯಾಮೋಹಿ. ಗೌರಿಬಿದನೂರು ತಾಲ್ಲೂಕಿನ ಬೆಳಚಿಕ್ಕನಹಳ್ಳಿಯ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸಿನಿಮಾ ನಟಿ ಮಂಜುಳಾ ಸಿನಿ ಬದುಕಿನ ಚಿತ್ರವನ್ನು ಕೊಡುವ ಪುಸ್ತಕವನ್ನು ಪ್ರಕಟಿಸಿದ್ದಾರೆ.